# ವಿಡಿಐಟಿಗೆ ಪ್ರಶಸ್ತಿ, ಪ್ರಯೋಗಾಲಯಕ್ಕೆ ಅನುದಾನ

**ಹಳಿಯಾಳ:** ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಯು) ಐಡಿಯಾ ಲ್ಯಾಬ್, ನವ ದೆಹಲಿಯು ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಎಲೆಕ್ಟ್ರಿಕ್ ವೆಹಿಕಲ್ ಪ್ರಯೋಗಾಲಯವನ್ನು ಸ್ಥಾಪಿಸಲಿದೆ. ಪರಿಸರ ಸ್ನೇಹಿ ಎಲೆಕ್ಟ್ರಿಕ್ ವಾಹನದ ಬಳಕೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿದ್ದು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಇದರ ಕುರಿತಾಗಿ ಮಾಹಿತಿ ಹೊಂದುವುದು ಅತ್ಯವಶ್ಯವಾಗಿರುವುದರಿಂದ, 45 ಲಕ್ಷಕ್ಕೂ ಅಧಿಕ ಮೊತ್ತವನ್ನು ಈ ಪ್ರಯೋಗಾಲಯಕ್ಕೆ ಮಂಜೂರು ಮಾಡಿದೆ. ಡಾ. ವಿ.ಎ. ಕುಲಕರ್ಣಿ ಮಾರ್ಗದರ್ಶನ ದಲ್ಲಿ, ಡಾ. ಮಹೇಂದ್ರ ದೀಕ್ಷಿತ್ ಮತ್ತು ಪ್ರೊ. ಅಲ್ಲಮ ಪ್ರಭು ಕೊಳಕಿ ಸಲ್ಲಿಸಿದ ಪ್ರಸ್ತಾವನೆಗೆ ಎಐಸಿಟಿಇ ಐಡಿಯಾ ಲ್ಯಾಬ್ ದಿಂದ ಅನುಮೋದನೆ ದೊರೆತಿದೆ.

ಅಂತರ್ ರಾಷ್ಟ್ರೀಯ ಮಟ್ಟದ ಐಇಇಇ ಸಂಸ್ಥೆಯುಆಯೋಜಿಸಿದ್ದಚಟುವಟಿಕೆಗಳಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಗುರುತಿಸಿ, ಅಭಿನಂದನಾ ಪ್ರಶಸ್ತಿ ನೀಡಲಾಗಿದೆ. ಇತ್ತೀಚೆಗೆ ಮಂಗಳೂರಿನಲ್ಲಿರುವ ಐಇಇಇ ಉಪ ಕಚೇರಿಯಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದು, ಮಹಾವಿದ್ಯಾಲಯದ ಪರವಾಗಿ ಡಾ. ಅರುಣ ಕಾಖಂಡಕಿ ಅಭಿನಂದನಾ ಪ್ರಶಸ್ತಿ ಸ್ವೀಕರಿಸಿದರು.

ವಿಡಿಐಟಿ ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ತೋರುತ್ತಿರುವ ಉತ್ತಮ ಸಾಧನೆಯನ್ನು ಗುರುತಿಸಿ ಕೋಲ್ಕತ್ತಾ ದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯು ವಿಶೇಷ ಮನ್ನಣೆ ನೀಡಿ ಪುರಸ್ಕರಿಸಿದೆ. ಸತತ ಎರಡನೆಯ ವರ್ಷ ಈ ಪುರಸ್ಕಾರ ದೊರೆತಿದೆ.

ವಿಡಿಐಟಿಯ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ ಪ್ರತಿಷ್ಠಿತ ಸಂಸ್ಥೆಗಳು ಪುರಸ್ಕರಿಸಿರುವುದಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಸಂತಸ ವ್ಯಕ್ತಪಡಿಸಿದ್ದಾರೆ. ಎಐಸಿಟಿಯು ಮಂಜೂರು ಮಾಡಿರುವ ಎಲೆಕ್ಟ್ರಿಕ್ ವಾಹನ ಪ್ರಯೋಗಾಲಯವು ವಿದ್ಯಾರ್ಥಿಗಳಿಗೆ ಎಲೆಕ್ಟ್ರಿಕ್ ವಾಹನದ ಕುರಿತಾಗಿ ಜ್ಞಾನ ಹೊಂದಲು ಸಹಕಾರಿಯಾಗಲಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದ್ದಾರೆ.



# ವಿಡಿಐಟಿಗೆ ಪ್ರಶಸ್ತಿ, ಪ್ರಯೋಗಾಲಯಕ್ಕೆ ಅನುದಾನ

**»ಜನಮಾಧ್ಯಮ, ಹಳಿಯಾಳ:** ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಯು) ಐಡಿಯಾ ಲ್ಯಾಬ್, ನವದೆಹಲಿಯು ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಎಲೆಕ್ಟ್ರಿಕ್ ವೆಹಿಕಲ್ ಪ್ರಯೋಗಾಲಯವನ್ನು ಸ್ಥಾಪಿಸಲಿದೆ. ಪರಿಸರ ಸ್ನೇಹಿ ಎಲೆಕ್ಟ್ರಿಕ್ ವಾಹನದ ಬಳಕೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿದ್ದು , ಎಂಜಿನೀಯರಿಂಗ್ ವಿದ್ಯಾರ್ಥಿಗಳು ಇದರ ಕುರಿತಾಗಿ ಮಾಹಿತಿ ಹೊಂದುವುದು ಅತ್ಯವಶ್ಯವಾಗಿರುವುದರಿಂದ, 45 ಲಕ್ಷಕ್ಕೂ ಅಧಿಕ ಮೊತ್ತವನ್ನು ಈ ಪ್ರಯೋಗಾಲಯಕ್ಕೆ ಮಂಜೂರು ಮಾಡಿದೆ. ಡಾ. ವಿ ಎ ಕುಲಕರ್ಣಿ ಮಾರ್ಗದರ್ಶನದಲ್ಲಿ, ಡಾ. ಮಹೇಂದ್ರ ದೀಕ್ಷಿತ್ ಮತ್ತು ಪ್ರೊ. ಅಲ್ಲಮ ಪ್ರಭು ಕೊಳಕಿ ಸಲ್ಲಿಸಿದ ಪ್ರಸ್ತಾವನೆಗೆ ಎಐಸಿಟಿಇ ಐಡಿಯಾ ಲ್ಯಾಬ್ ನಿಂದ ಅನುಮೋದನೆ ದೊರೆತಿದೆ.

ಅಂತಾರಾಷ್ಟ್ರೀಯ ಮಟ್ಟದ ಐಇಇಇ ಸಂಸ್ಥೆಯು ಆಯೋಜಿಸಿದ್ದ ಚಟುವಟಿಕೆಗಳಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಗುರುತಿಸಿ, ಅಭಿನಂದನಾ ಪ್ರಶಸ್ತಿ ನೀಡಲಾಗಿದೆ. ಇತ್ತೀಚೆಗೆ ಮಂಗಳೂರಿನಲ್ಲಿರುವ ಐಇಇಇ ಉಪ ಕಚೇರಿಯಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದು, ಮಹಾವಿದ್ಯಾಲಯದ ಪರವಾಗಿ ಡಾ. ಅರುಣ ಕಾಖಂಡಕಿ ಅಭಿನಂದನಾ ಪ್ರಶಸ್ತಿ ಸ್ವೀಕರಿಸಿದರು.

ವಿಡಿಐಟಿ ಎಂಜಿನೀಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ತೋರುತ್ತಿರುವ ಉತ್ತಮ ಸಾಧನೆಯನ್ನು ಗುರುತಿಸಿ ಕೋಲ್ಕತ್ತಾದ ಇನ್ಸ್ಟಿಟ್ಯೂಟ್ ಆಫ್ ಎಂಜಿನೀಯರ್ಸ್ ಸಂಸ್ಥೆಯು ವಿಶೇಷ ಮನ್ನಣೆ ನೀಡಿ ಪುರಸ್ಕರಿಸಿದೆ. ವಿಡಿಐಟಿಗೆ ಸತತ ಎರಡನೆಯ ವರ್ಷ ಈ ಪುರಸ್ಕಾರ ದೊರೆತಿದೆ.ವಿಡಿಐಟಿಯ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ ಪ್ರತಿಷ್ಠಿತ ಸಂಸ್ಥೆಗಳು ಪುರಸ್ಕರಿಸಿರುವುದಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಸಂತಸ ವ್ಯಕ್ತಪಡಿಸಿದ್ದಾರೆ. ಅಂತೆಯೇ, ಎಐಸಿಟಿ ಯು ಮಂಜೂರು ಮಾಡಿರುವ ಎಲೆಕ್ಟ್ರಿಕ್ ವಾಹನ ಪ್ರಯೋಗಾಲಯವು ವಿದ್ಯಾರ್ಥಿಗಳಿಗೆ ಎಲೆಕ್ಟ್ರಿಕ್ ವಾಹನದ ಕುರಿತಾಗಿ ಜ್ಞಾನ ಹೊಂದಲು ಸಹಕಾರಿಯಾಗಲಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದ್ದಾರೆ.

Main Edition
Jan 23, 2025 Page No. 4
Powered by: janamadhyama.news